ಸಂಸದನೊಬ್ಬನಿಗೆ ಬಂದಿದ್ದ ನಿದ್ದೆ ಬಾರದ ರೋಗ ಪೂಜಾರಿಯ ಎರಡೇ ಎರಡು ಏಟುಗಳಿಂದ ಪೂರಾ ಗುಣವಾಗಿ ಬಿಟ್ಟಿತ್ತಂತೆ! ಹಂಗಾಗಿ ಆ ಸಂಸದ ಬಂದೋಗುವ ಭಕ್ತರಿಗೆ ಅನುಕೂಲವಾಗಲೆಂದು ಕೇವಲ ಪ್ಯಾಸೆಂಜರ್ ರೈಲುಗಳು ಮಾತ್ರವಲ್ಲದೆ ಕೆಲವು ಎಕ್ಸ್‌ಪ್ರೆಸ್ ರೈಲುಗಳೂ ನಿಲ್ಲಲ್ಲು, ದಿಲ್ಲಿಯಿಂದ ಅನುಮತಿ ದೊರಕುವಂತೆ ಮಾಡಿದ್ದ. ಆ ಅಂಕಾಲೆ ಗುತ್ತಿಯ ಪೂಜಾರಿಯ ಮಹಿಮೆ ಪೂರಾ ಮಾಯವಾಗಿ ಅಲ್ಲಿಗೆ ಒಬ್ಬನೇ ಒಬ್ಬ ಭಕ್ತ ಹೋಗದಂಥ ಸ್ಥಿತಿ ಬಂದಿದ್ದರೂ ಆ ಸ್ಟೇಷನ್ನಿನಲ್ಲಿ ನಿಲ್ಲುವ ರೈಲುಗಳ ನಿಲುಗಡೆ ಮಾತ್ರ ಮುಂದುವರೆದಿತ್ತು.

ಗಂಟೆ ಹತ್ತಾಗಿತ್ತು. ಹಾಲು ಚೆಲ್ಲಿದಂಗೆ ಬೆಳದಿಂಗಳಿತ್ತು. ಸಂಜೆಗೇ ಸುರಿಯತೊಡಗಿದ್ದ ಕಾವಳ ಮುಕ್ಕಿರಿಯುತ್ತಿತ್ತು. ಹಂಗಾಗಿ ಚಳಿ ನಾನು ನಾನೇ ಅನ್ನುತ್ತಿತ್ತು. ಬಗಲಲ್ಲಿದ್ದ ಕಪ್ಪೆ ಹೊಟ್ಟೆಯಂಗೆ ಊದಿಕೊಂಡಿದ್ದ ಕೈಚೀಲದ ಮೇಲೊಂದು ಕೈಯ್ಯಿಟ್ಟುಕೊಂಡಿದ್ದ ಗದ್ದಿಗ್ಯಪ್ಪ ಮತ್ತೊಂದು ಕೈಯ್ಯಿಂದ ಗೇಣುದ್ದದ ಗಡ್ಡವನ್ನು ನೀವಿಕೊಳ್ಳುತ್ತಾ ರೈಲ್ವೇ ಹಳಿಗಳ ಪಕ್ಕದಲ್ಲಿ ಹರಿದಿದ್ದ ಕಾಲ್ದಾರಿಯನ್ನೇ ದಿಟ್ಟಿಸಿದ. ಹತ್ತಿರದಲ್ಲಿದ್ದ ಕಾಲ್ದಾರಿಯ ಪಕ್ಕದಲ್ಲಿ ಉದ್ದಕ್ಕೂ ಬೆಳೆದಿದ್ದ ತಂಗಡೆ ಗಿಡಗಳಲ್ಲಿದ್ದ ಹಳದಿ ಹೂಗಳ ಮೇಲೆ ನಿಲ್ದಾಣದ ಬೆಳಕು ಬಿದ್ದಿತ್ತು. ಅದರಾಚೆಗೆ ಆ ದಾರಿಯೂ ಮತ್ತಾ ಹೂಗಳೂ ಅಸ್ಪಷ್ಟವಾಗಿ ಕಪ್ಪಗೆ ಕಾಣುತ್ತಿದ್ದವು. ನಂತರ ತನ್ನ ಬಲ ಬದಿಗಿದ್ದ ಪುಟ್ಟ ಕೆರೆಯತ್ತ ದಿಟ್ಟಿಸತೊಡಗಿದ. ಅದರಲ್ಲಿ ಅಲ್ಲಲ್ಲಿ ಹಗಲೆಲ್ಲಾ ಅರಳಿದ್ದ ಇರುಳಾಗುತ್ತಲೇ ಮುದುಡಿಕೊಂಡಿದ್ದ ಕೆಂದಾವರೆಯ ಮೊಗ್ಗುಗಳು ಕಾಣುತ್ತಿದ್ದವು. ಅಲ್ಲಿ ಇಲ್ಲಿ ಆಟೀಟು ಬಿಟ್ಟರೆ ಇಡೀ ಕೆರೆಯನ್ನು ಕೆಂದಾವರೆಯ ಎಲೆಗಳು ಕವುಕಂಡಿದ್ದವು. ಅವುಗಳ ನಡುವಲ್ಲಿ ಗುಳುಮುಳು ಹಕ್ಕಿಗಳು ಮುಳುಗೇಳುವ ಆಟದಲ್ಲಿ ತೊಡಗಿದ್ದವು.

ಕಾಲು ದಾರಿಯನ್ನು ಹಿಡಿದು ಊರು ಸೇರಬೇಕೆಂದುಕೊಂಡಿದ್ದ ಗದ್ದಿಗ್ಯಪ್ಪ ಮನಸು ಬದಲಿಸಿ ರೈಲುನಿಲ್ದಾಣದ ಆಚೆ ಬದಿಯಿಂದ ತನ್ನ ಜಮೀನಿನ ಮೇಗಾಸಿ ತನ್ನೂರಿಗೆ ಹರಿದಿದ್ದ ರಸ್ತೆಯಲ್ಲಿ ನಡೆಯತೊಡಗಿದ. ನಿಲ್ದಾಣದ ಪಕ್ಕದಲ್ಲಿದ್ದ ಗುಡಿಸಲುಗಳು ತಾರಸಿ ಮನೆಗಳಾಗಿ ಬದಲಾಗಿದ್ದವು. ಎತ್ತಿನ ಗಾಡಿಗಳೂ ಓಡಾಡಲು ಆಗದಷ್ಟು ಅಧ್ವಾನವಾಗಿದ್ದ ರಸ್ತೆ ಡಾಂಬರು ಬಳಿದುಕೊಂಡಿತ್ತು. ವರ್ಷವಿಡೀ ಜೋಪಿನಿಂದ ಪತಗುಡುತ್ತಿದ್ದ ರಸ್ತೆ ಪಕ್ಕದ ಕೊರಕಲನ್ನು ಮುಚ್ಚಾಕಿ ಅಲ್ಲಿ ಉದ್ದಕ್ಕೂ ಕಾಡು ಕಲ್ಲನ್ನು ಅದ್ದು ಅಣೆಯನ್ನು ಕಟ್ಟಲಾಗಿತ್ತು. ಅಲ್ಲೊಂದು ಇಲ್ಲೊಂದು ಹಕ್ಕಿಗಳ ಕೊರಗಾಟ ಚಳಿ ತುಂಬಿದ ಇರುಳಿಗೆ ಶೃತಿ ಹಿಡಿಯುತ್ತಿದ್ದವು. ಗದ್ದಿಗ್ಯಪ್ಪ ಮೆಟ್ಟಿಕೊಂಡಿದ್ದ ಹವಾಯಿ ಚಪ್ಪಲಿಗಳ ಪಟಪಟ ಸದ್ದು ಅವುಗಳಿಗೆ ಜೊತೆಯಾಗಿತ್ತು.

ತನ್ನ ಜಮೀನು ಇನ್ನೇನು ಹತ್ತಿರವಾಗುತ್ತಿದೆ ಅನ್ನುವಾಗ ವಿಚಿತ್ರ ತಳಮಳಕ್ಕೊಳಗಾದ ಗದ್ದಿಗ್ಯಪ್ಪ ಕಾಲು ಸೋತವನಂತೆ ರಸ್ತೆ ಬದಿಗಿದ್ದ ದುಂಡಿಯೊಂದರ ಮೇಲೆ ಕೂತ. ತಳಮಳವನ್ನು ರವಷ್ಟು ತಮಣೆಗೆ ತಂದುಕೊಂಡು ಹೊರಡುವ ಹೊತ್ತಿಗೆ ನೆತ್ತಿಯ ಮೇಲಿದ್ದ ಚಂದ್ರ ಅಲ್ಲಿಂದ ಸುಮಾರು ದೂರ ನಡೆದು ಹೋಗಿದ್ದ. ತನ್ನ ಜಮೀನಿನ ಹೊಳೆ ಬಾಗಿಲ ಪಕ್ಕದಲ್ಲಿದ್ದ ಮುರುಕಲಸಿನ ಮರದಿಂದ ಇದು ತನ್ನದೇ ಜಮೀನು ಅಂತ ಗುರುತಾದರೂ ಅದರೊಳಗಿನದು ಮಾತ್ರ ಅವನಿಗೆ ಅರಗಿಸಿಕೊಳ್ಳಲಾದಷ್ಟು ಬದಲಾಗಿ ಹೋಗಿತ್ತು. ಇಷ್ಟೊತ್ತಿಗೆ ಹೊಲವೆಲ್ಲಾ ಪಾಳು ಬಿದ್ದು ಗಿಡಗಂಟೆಗಳು ಬೆಳಕಂಡು ಅಸ್ತವ್ಯಸ್ತವಾಗಿರುತ್ತದೆ ಅಂದುಕೊಂಡಿದ್ದವನಿಗೆ ಅಚ್ಚರಿ ಹುಟ್ಟಿಸುವಂತೆ ಅಲ್ಲೊಂದು ತೆಂಗಿನ ತೋಟ ಎದ್ದಿತ್ತು. ನೋಡ ನೋಡುತ್ತಲೇ ಅದು ಗದ್ದಿಗ್ಯಪ್ಪನ ಎದೆಗಾಕಿ ಗುದ್ದಿದಂಗಾಯ್ತು. ಹೊಳೆ ಬಾಗಿಲನ್ನು ವಾರಾಸೆ ಮಾಡಿಕೊಂಡು ಒಳ ಹೋಗಿ ನೋಡಿದರೆ ತೋಟದೊಳಗಿನ ಸಕಲವೂ ಬದಲಾಗಿ ಹೋಗಿತ್ತು. ತೋಟದ ನಡುವಿನ ದೊಡ್ಡ ಬದುವಿನ ಜಾಗದಲ್ಲಿ ಗಾಡಿ ಜಾಡು ಬೆಳೆದಿತ್ತು. ಅದನ್ನು ಹಿಡಿದು ಮುಂದುವರೆದರೆ ಸಂಪಿಗೆ ಮರದ ವಾರಾಸೆಗೇ ಇದ್ದ ಕಲ್ಲು ಬಾವಿ ಹೇಳ ಹೆಸರಿಲ್ಲದಂತೆ ಮಂಗಮಾಯವಾಗಿತ್ತು. ಅದರ ಜಾಗದಲ್ಲಿ ಹತ್ತಾರು ಅಡಕೆ ಮರಗಳೆದ್ದಿದ್ದವು. ಕೊಂಚ ದೂರದಲ್ಲಿ ಕೊಳವೆ ಬಾವಿಯೂ ಅದಕ್ಕಾಗಿ ಕೂರಿಸಿದ್ದ ಪುಟ್ಟ ಪೆಟ್ಟಿಗೆಯೊಂದೂ ಕಾಣಿಸಿತು. ಇದನ್ನೆಲ್ಲಾ ನೋಡುತ್ತಲೇ ದಿಗಿಲಿಗೊಳಗಾದ ಗದ್ದಿಗ್ಯಪ್ಪ ಒಂದೇ ಉಸುರಿಗೆ ಮಗ ಗಾಂಧಿಯ ಸಮಾಧಿಯಿದ್ದ ಜಾಗದತ್ತ ಅಂದಾಜಿನ ಮೇಲೆ ದೌಡಾಯಿಸಿದ. ಅಲ್ಲಿ ಸಮಾಧಿಯ ಯಾವೊಂದೂ